ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ**. 646/2019**

ದಿಃ **22-12-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು**.**

| | | | |
|---|---|---|---|
| ಹೆಸರು | ರವಿ ಕುಮಾರ್ | ಸಿ**.**ಡಬ್ಲ್ಯೂ | **01** |
| ವಯಸ್ಸು | 37 ವರ್ಷ | ಪಿ**.**ಡಬ್ಲ್ಯು**:** | **02** |
| ತಂದೆಯ ಹೆಸರು | ಪಾಂಡುರಂಗ | | |
| ವೃತ್ತಿ | ಬ್ಯಾಂಕ್ ಮ್ಯಾನೇಜರ್ | | |
| ವಾಸಸ್ಥಳ | ಔರಾದ್ ತಾಲ್ಲೂಕು, ಬೀದರ್ ಜಿಲ್ಲೆ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ಗೌರಿಬಿದನೂರಿನಲ್ಲಿರುವ ಭಾರತ್ ಫೈನ್ಯಾನ್ಸ್ ಲಿಮಿಟೆಡ್ ನ ಕಛೇರಿಯಲ್ಲಿ ನನ್ನನ್ನು ಸೇರಿಸಿ 10 ಜನರು ಸ್ಟಾಫ್ ಆಗಿ ಕೆಲಸ ಮಾಡುತ್ತಿದ್ದೆವು. ಸಾಮಾನ್ಯವಾಗಿ ದಸರ ಹಬ್ಬದ ಕಲೆಕ್ಷನ್ ಹೆಚ್ಚಾಗಿ ಬರುತ್ತಿತ್ತು ಆದರೆ ಕೆಲಸದ ಒತ್ತಡದಿಂದ ಕಲೆಕ್ತನ್ ಆಗಿರುವ ಹಣವನ್ನು ಡೆಪಾಜಿಟ್ ಮಾಡಲು ಆಗುತ್ತಿರಲಿಲ್ಲ. ಆದ ಕಾರಣ ನಮ್ಮ ಯುನೀಟ್ ಮ್ಯಾನೇಜರ್ ಮತ್ತು ಏರಿಯ ಕ್ರೆಡಿಟ್ ಮ್ಯಾನೇಜರ್ ರವರಿಗೆ ವಿಷಯವನ್ನು ತಿಳಿಸಿ, ಅವರನ್ನು ಕಛೇರಿಗೆ ಕರೆಯಿಸಿದೆವು. ಅವರು ಕಛೇರಿಗೆ ಬಂದು ಡೆಪಾಜಿಟ್ ಮಾಡಲು ರೂ. 29,00,950/- ಗಳನ್ನು ದೊಡ್ಡಬಳ್ಳಾಪುರದ ಎಸ್.ಬಿ.ಐ ಬ್ಯಾಂಕಿಗೆ ತೆಗೆದುಕೊಂಡು ಹೋದರು. ನಂತರ ಉಳಿದ ಹಣವನ್ನು ನಾನು ಮತ್ತು ರೋಹಿತ್ ರವರು ಸೇರಿ ದಿನಾಂಕ 17-10-2018 ರ ಬೆಳಿಗ್ಗೆ ಡೆಪಾಜಿಟ್ ಮಾಡಿ ಕಛೇರಿಗೆ ಬಂದೆವು. ಸದರಿ ರೋಹಿತ್ ಕುಮಾರ್ ರವರು ಬ್ಯಾಂಕ್‌ಕ್ರೆಡಿಟ್ ಮ್ಯಾನೇರ್ ಆಗಿ ಸುಮಾರು 3-4 ವರ್ಷಗಳಿಂದ ಕೆಲಸ ಮಾಡುತ್ತಿದ್ದರು.

ದಿನಾಂಕ 17-10-2018 ರಂದು ರೋಹಿತ್ ಕುಮಾರ್ ರವರು ಸ್ಟಾಫ್ ನ ಬಳಿ ಇದ್ದ ಕಲೆಕ್ಷನ್ ಮೊತ್ತವಾದ ರೂ. 8,61,500/- ಗಳನ್ನು ಗೌರಿಬಿದನೂರಿನ ಎಸ್.ಬಿ.ಐ ಬ್ಯಾಂಕಿಗೆ ಡೆಪಾಜಿಟ್ ಮಾಡಲು ತೆಗೆದುಕೊಂಡು ಹೋದರು. ಆದರೆ ಆ ದಿನ ಗೌರಿಬಿದನೂರಿನ ಎಸ್.ಬಿ.ಐ ಬ್ಯಾಂಕಿನಲ್ಲಿ ರೂ. 2,16,500/- ಗಳು ಮಾತ್ರ ಡೆಪಾಜಿಟ್ ಆಗಿರುತ್ತದೆ ಮತ್ತು ಉಳಿದ ರೂ. 6,45,500/- ಗಳು ಡೆಪಾಜಿಟ್ ಆಗಿರುವುದಿಲ್ಲ. ಈ ರೀತಿ ಕಡಿಮೆ ಡೆಪಾಜಿಟ್ ಆಗಿದೆ ಎಂದು ಸುಮಾರು 4 ದಿನ ಕಳೆದ ನಂತರ ಬ್ಯಾಂಕ್ ಸ್ಟೇಟ್ಮೆಂಟ್ ಅನ್ನು ಪಡೆದಾಗ ತಿಳಿದು ಬಂದಿರುತ್ತದೆ ಹಾಗೂ ರೋಹಿತ್ ಕುಮಾರ್ ರವರು

ನೀಡಿದ ಡೆಪಾಜಿಟ್ ಸ್ಲಿಪ್ ಅನ್ನು ನೋಡಿದಾಗ ಅದರಲ್ಲಿ ತಿದ್ದುಪಡಿ ಆಗಿರುವುದು ಕಂಡುಬಂದಿರುತ್ತದೆ.  ಸದರಿ ಕಂಪನಿಯ ಹಣವಾದ ಉಳಿಕೆ ಮೊತ್ತವನ್ನು ರೋಹಿತ್ ಕುಮಾರ್ ರವರು ದುರುಪಯೋಗ ಪಡಿಸಿಕೊಂಡಿರುತ್ತಾರೆ.

ನಂತರ ನಾನು ಮತ್ತು ನಮ್ಮ ಕಛೇರಿಯ ಮೇಲಾಧಿಕಾರಿಗಳು ಸಿ.ಸಿ. ಟಿ.ವಿ ಫೂಟೇಜ್ ಅನ್ನು ಪರಿಶೀಲಿಸಿದಾಗ ಕೌಂಟರ್ ನಲ್ಲಿ ಕಡಿಮೆ ಮೊತ್ತವನ್ನು ರೋಹಿತ್ ಕುಮಾರ್ ರವರು ಡೆಪಾಜಿಟ್ ಮಾಡಿರುವುದು ಕಂಡುಬಂದಿತು.  ನಂತರ ನನ್ನ ಮೇಲಾಧಿಕಾರಿಯದ ಚಾಸಾ-3 ರವರಿಗೆ ವಿಷಯವನ್ನು ತಿಳಿಸಿದೆನು.  ನಂತರ ದಿನಾಂಕ 17-11-2018 ರಂದು ಗೌರಿಬಿದನೂರು ಪುರ ಪೋಲೀಸ್ ಠಾಣೆಗೆ ಹೋಗಿ ಲಿಖಿತ ದೂರನ್ನು ನೀಡಿರುತ್ತೇನೆ.  ಸಾಕ್ಷಿಯು ದಿನಾಂಕ 17-11-2018 ರ ದೂರನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದೂರನ್ನು ನಿಪಿ-1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.  ದೂರನ್ನು ನೀಡುವಾಗ ಪೋಲೀಸರಿಗೆ ಬ್ಯಾಂಕ್ ವಿತ್ ಡ್ರಾಯಲ್ ರೆಜಿಸ್ಟರ್, ಕ್ಯಾಶ್ ಬುಕ್, ಓಚರ್ಸ್, ಮುವ್ ಮೆಂಟ್ ರೆಜಿಸ್ಟರ್, ಬ್ಯಾಂಕ್ ಪೇಮೆಂಟ್ ಓಚರ್ಸ್ ಮತ್ತು ರೋಹಿತ್ ಕುಮಾರ್ ರವರು ತಿದ್ದುಪಡಿ ಮಾಡಿರುವ ಬ್ಯಾಂಕ್ ಸ್ಲಿಪ್ ಅನ್ನು ನೀಡಿರುತ್ತೇನೆ.  ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಬ್ಯಾಂಕ್ ಡೆಪಾಜಿಟ್/ವಿತ್ ಡ್ರಾವಲ್ ರೆಜಿಸ್ಟರ್ ಅನ್ನು ನೋಡಿ ಅದರಲ್ಲಿ 19 ನೇ ಪುಟದಲ್ಲಿರುವ ದಿನಾಂಕ 17-10-2018 ರ ಎಂಟ್ರಿ ಅನ್ನು ನೋಡಿ ಗುರುತಿಸಿದ್ದು ಸದರಿ ಬ್ಯಾಂಕ್ ಡೆಪಾಜಿಟ್/ವಿತ್ ಡ್ರಾವಲ್ ರೆಜಿಸ್ಟರ್ ಅನ್ನು ನಿಪಿ-2 ಎಂದು ಗುರುತಿಸಲಾಯಿತು ಹಾಗೂ ಅದರಲ್ಲಿರುವ ಸೀರಿಯಲ್ ನಂ. 15 ರ ಎಂಟ್ರಿ ಅನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು Bharat Financial Inclusion Limited ರ ಕ್ಯಾಶ್ ಬುಕ್ ಅನ್ನು ನೋಡಿ ಅದರ 155 ನೇ ಪುಟದಲ್ಲಿರುವ ಎಂಟ್ರಿ ಅನ್ನು  ಗುರುತಿಸಿದ್ದು ಸದರಿ Bharat Financial Inclusion Limited ರ ಕ್ಯಾಶ್ ಬುಕ್ ಅನ್ನು ನಿಪಿ-3 ಎಂದು ಗುರುತಿಸಲಾಯಿತು ಹಾಗೂ ಅದರಲ್ಲಿರುವ 155 ನೇ ಪುಟದ ಎಂಟ್ರಿ ಅನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ದಿನಾಂಕ **17-10-2018** ರ ಅಸಲಿ ಪೇ ಇನ್ ಸ್ಲಿಪ್ ಈ ಪ್ರಕರಣದ ಕಡತದಲ್ಲಿ ಕಾಣದ ಕಾರಣ ಅದನ್ನು ತನಿಖಾಧಿಕಾರಿಯ ಮುಖಾಂತರ ನಿಶಾನೆಯನ್ನಾಗಿ ಪರಿಗಣಿಸಲಾಗಬಹುದು**.**

ಸಾಕ್ಷಿಯು ದಿನಾಂಕ 14-06-2016 ರ ರೋಹಿತ್ ಕುಮಾರ್ ರವರು ನೀಡಿರುವ Indemnity Bond ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು ಹಾಗೂ ಸದರಿ Indemnity Bond ನೊಂದಿಗೆ ರೋಹಿತ್ ಕುಮಾರ್ ರವರು ಸಲ್ಲಿಸಿರುವ ಸಾಕ್ಷಿಗಳ 2 ಪೇ ಸ್ಲಿಪ್, ಚುನಾವಣಾ ಗುರುತಿನ ಚೀಟಿಗಳು, ಶಿಕ್ಷಕಿಯ ಗುರುತಿನ ಚೀಟಿ ಮತ್ತು ಪ್ರಮಾಣ ಪತ್ರವನ್ನು ನಿಪಿ-4(ಎ) ರಿಂದ ನಿಪಿ-4(ಹೆಚ್) ಎಂದು ಗುರುತಿಸಲಾಯಿತು ಹಾಗೂ 1 ಚೆಕ್ ಲಿಸ್ಟ್ ಅನ್ನು ನಿಪಿ-4(ಐ) ಎಂದು ಗುರುತಿಸಲಾಯಿತು.

ರೋಹಿತ್ ಕುಮಾರ್ ರವರಿಗೆ ಸಂಬಂಧಪಟ್ಟ 11 ಪುಟಗಳ Joining report ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ರೋಹಿತ್ ಕುಮಾರ್ ರವರಿಗೆ ಸಂಬಂಧಪಟ್ಟ Life Insurance Member Enrollment Form ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ರೋಹಿತ್ ಕುಮಾರ್ ರವರಿಗೆ ಸಂಬಂಧಪಟ್ಟ Declaration Form ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ರೋಹಿತ್ ಕುಮಾರ್ ರವರಿಗೆ ಸಂಬಂಧಪಟ್ಟ Nomination and Declaration Form ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ರೋಹಿತ್ ಕುಮಾರ್ ರವರಿಗೆ ಸಂಬಂಧಪಟ್ಟ SMT confirmation Test Paper ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ರೋಹಿತ್ ಕುಮಾರ್ ರವರಿಗೆ ಸಂಬಂಧಪಟ್ಟ Pay Slip ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿನಾಂಕ 17-10-2018 ರ ಬ್ಯಾಂಕ್ ಬುಕ್ಕಿನ Computer generated extract ಅನ್ನು ನೋಡಿ ಗುರುತಿಸಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿನಾಂಕ 01-10-2018 ರಿಂದ 31-10-2018 ರ ವರೆಗಿನ Bank statement ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

ಸಾಕ್ಷಿಯು Bharat Financial Inclusion Limited ರವರಿಗೆ ಭಾರತ ಸರ್ಕಾರವು ನೀಡಿರುವ Certificate of Incorporation pursuant to change of name ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

ಸಾಕ್ಷಿಯು ಕ್ಯಾಶ್ ಬುಕ್ ನ 3 ಪುಟಗಳ Computer generated extract ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಮತ್ತು ನಿಪಿ-14(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ದಿನಾಂಕ 23-10-2018 ರ Transfer letter ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿನಾಂಕ 18-01-2019 ರ Attendance Letter ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿನಾಂಕ 17-10-2018 ರ ಪೇ ಇನ್ ಸ್ಲಿಪ್ ನ ಧೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

Bharat Financial Inclusion Limited ಗೆ ಸಂಬಂಧಪಟ್ಟ Statement of Account ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾ ಮುಂದೆ ಇರುವ ಆರೋಪಿಯನ್ನು ನೋಡಿ ಈ ಪ್ರಕರಣದಲ್ಲಿ ತನ್ನ ಕಛೇರಿಯಲ್ಲಿ ಮೋಸ ಮಾಡಿರುವ ವ್ಯಕ್ತಿ ಎಂದು ಗುರುತಿಸಿರುತ್ತಾರೆ.

**(**ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಬಿ**.**ಎನ್**.**ಎನ್ ರವರು ಕಾಲಾವಕಾಶ ಕೋರಿದ್ದು ನೀಡಲಾಯಿತು**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ**.**ಹೇ**.**ಕೇ**.**ಸ**.** ಇದೆ

ಸಹಿ**/-**
ಪ್ರ**.**ಸಿ**.**ನ್ಯಾ ಮತ್ತು ಜೆಎಂಎಫ್‌ಸಿ**,**
ಗೌರಿಬಿದನೂರು